ಏಳು ಕಾದಂಬರಿಗಳನ್ನು ಬರೆದಿದ್ದೇನೆ. ಸಾಯೋಕೆ ಮುಂಚೆ ಇನ್ನೂ ಏಳು ಕಾದಂಬರಿಗಳನ್ನು ಬರೆಯಬೇಕು ಅಂತಾಸೆ. ಆದರೆ, ಬದುಕು ಬಹಳ ಚಿಕ್ಕದು.

ಇದನ್ನು ಯಾಕೆ ಮಾಡುತ್ತಿದ್ದೇನೆ? ಇದರರ್ಥವೇನು? ಮೊದಲ ಕಾರಣ ರೂಮಿನಲ್ಲಿ ಒಬ್ಬನೇ ಇರಬೇಕೆಂಬ ಆಸೆ. ಎರಡನೆಯದು ನನ್ನೊಳಗಿರುವ ಹುಡುಗತನ. ಅದು ಮತ್ತೊಂದು ಒಳ್ಳೆಯ ಪುಸ್ತಕ ಬರೆಯುವ ಪ್ರಯತ್ನ ಮಾಡಬೇಕೆಂದುಕೊಳ್ಳುತ್ತದೆ. ಲೇಖಕರು ಅಜರಾಮರರು ಅನ್ನುವುದರ ಬಗ್ಗೆ ನಂಬಿಕೆಯಿಲ್ಲ. ಇನ್ನೂರು ವರ್ಷಗಳ ಕೆಳಗೆ ಬರೆದ ಪುಸ್ತಕಗಳಲ್ಲಿ ಕೆಲವನ್ನು ಮಾತ್ರ ಓದುತ್ತಿದ್ದೇವೆ. ಎಲ್ಲವೂ ವೇಗವಾಗಿ ಬದಲಾಗುತ್ತವೆ. ಇಂದು ಬರೆದ ಪುಸ್ತಕಗಳು ನೂರು ವರ್ಷಗಳ ಬಳಿಕ ಮರೆತೇಹೋಗಬಹುದು. ಕೆಲವೇ ಕೆಲವನ್ನು ಓದಬಹುದು. ಇನ್ನೂರು ವರ್ಷಗಳ ಬಳಿಕ ಬಹುಶಃ ಇಂದು ಬರೆದಿರುವ ಐದು ಪುಸ್ತಕಗಳನ್ನು ಮಾತ್ರ ಓದಬಹುದು. ಆ ಐದರಲ್ಲಿ ಒಂದು ನನ್ನ ಪುಸ್ತಕ ಎನ್ನುವ ನಂಬಿಕೆಯಿದೆ.

ಹಾಗಾದರೆ ಬರವಣಿಗೆಯ ಅರ್ಥ ಇದೇ ಏನು? ಇನ್ನೂರು ವರ್ಷಗಳ ಬಳಿಕ ನನ್ನನ್ನು ಓದಬೇಕು ಅಂತ ನಾನ್ಯಾಕೆ ತಲೆಕೆಡಿಸಿಕೊಳ್ಳಬೇಕು? ಇನ್ನಷ್ಟು ಹೆಚ್ಚು ಕಾಲ ಬದುಕುವ ಕುರಿತು ಯೋಚಿಸಬೇಕಲ್ಲವೆ? ಮುಂದೆಯೂ ನನ್ನ ಪುಸ್ತಕ ಓದುತ್ತಾರೆ ಎನ್ನುವ ಸಮಾಧಾನ ನನಗೆ ಬೇಕಿದೆಯೇ? ಇವೆಲ್ಲವೂ ಬರವಣಿಗೆ ಮುಂದುವರೆಸಲು ಕಾರಣಗಳಿರಬಹುದು. ನಿಜವಾದ ಕಾರಣ ನನಗೆ ಗೊತ್ತಿಲ್ಲ. ಆದರೆ, ನಾನೆಂದೂ ಬರೆಯುವುದನ್ನು ನಿಲ್ಲಿಸುವುದಿಲ್ಲ. ನಿಮ್ಮ ಪುಸ್ತಕಗಳು ಭವಿಷ್ಯದ ಮೇಲೆ ಪ್ರಭಾವ ಬೀರುತ್ತದೆ ಎನ್ನವ ಸಮಾಧಾನ ಸಿಕ್ಕರೆ ಅದೇ ಈ ಬದುಕಿನಲ್ಲಿ ನೀವು ಪಡೆಯುವ ಖುಷಿ.

---

### ಏಂಜೆಲ್ ಗುರ್‍ರಿಯಾ–ಕ್ವಿಂಟಾನಾ

ಸಂದರ್ಶಕರು ಇತಿಹಾಸಕಾರ, ಫ್ರೀಲಾನ್ಸ್ ಪತ್ರಕರ್ತ, ಸಂಪಾದಕ ಹಾಗೂ ಸ್ಪಾನಿಷ್ ಮತ್ತು ಪೋರ್ಚುಗೀಸ್ ಭಾಷೆಗಳ ಅನುವಾದಕರು. ಅವರು Financial Times ಪತ್ರಿಕೆಗೆ ನಿಯಮಿತವಾಗಿ ಲೇಖನಗಳನ್ನು ಬರೆಯುತ್ತಾರೆ. ಅಲ್ಲದೆ The observer, The Economist, Prospect, The Paris Review ಮತ್ತು Brick ಪತ್ರಿಕೆಗಳಲ್ಲಿ ಅವರ ಬರಹಗಳು ಪ್ರಕಟವಾಗಿದೆ. Other Carnivals: Short Stories from Brazil, The Return, by Dulce Maria Cardoso ಅವರ ಪ್ರಕಟಿತ ಪುಸ್ತಕಗಳು.

### ಹೇಮಾ ಎಸ್.

ಕನ್ನಡದಲ್ಲಿ ಎಂ.ಎ. ಹಾಗೂ ಪಿಎಚ್.ಡಿ. ಪದವೀಧರೆ. ಕನ್ನಡ ಉಪನ್ಯಾಸಕಿಯಾಗಿ ಕೆಲಸ ಮಾಡಿದ್ದಾರೆ. ಆಕಾಶವಾಣಿಯಲ್ಲಿ ಕೆಲವು ಕಾಲ ಉದ್ಘೋಷಕಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಇಂಗ್ಲಿಷ್ ಹಾಗೂ ಹಿಂದಿಯಿಂದ ಲೇಖನ, ಕತೆ ಹಾಗೂ ಕವನಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಸಾಹಿತ್ಯ ಓದು ಹಾಗೂ ಅನುವಾದ ಹವ್ಯಾಸಗಳು. ಪ್ರಕಟಿತ ಕೃತಿಗಳು: ‘ಹೆಸರಿಲ್ಲದ ಹೂ’ (ಅಬ್ಬಾಸ್ ಕಿರಸ್ತೊಮಿ ಕವನಗಳ ಅನುವಾದ) ಮತ್ತು ‘ಉರಿವ ಬನದ ಕೋಗಿಲೆಗಳು’ (ಅನುವಾದಿತ ಲೇಖನಗಳ ಸಂಗ್ರಹ). ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.